**ಸಾಕ್ಷಿಯನ್ನು ದಿಃ 13.07.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನಾನು 2017 ರಿಂದ ultra-tech cement ವ್ಯವಾಹರವನ್ನು ಪ್ರಾರಂಭಸಿದ್ದೇನೆ. ಸಿಮೆಂಟ್ ನ್ನು ಮಾತ್ರ distribute ಮಾಡುತ್ತೇನೆ. ಶ್ರೀ ಬಿಳಿಗಿರಿ ಟ್ರೇಡರ್ಸ್ ನಲ್ಲಿ ವ್ಯವಹಾರ ಮಾಡುತ್ತೇನೆ. GST registration ಆಗಿದೆ. Sale register, stock register ಇಟ್ಟಿದ್ದೇನೆ. ಪ್ರತಿವಾದಿ 2021 ರಿಂದ ಪರಿಚಯವಿದ್ದಾರೆ. ಅವರು Bilvika India construction private ನ್ನು ನಡೆಸುತ್ತಾರೆ. ಪ್ರತಿವಾದಿ ಫೋನ್ ಮುಖಾಂತರ ನನಗೆ ಸಿಮೆಂಟ್ ಸರಬರಾಜು ಮಾಡಲು ಹೇಳಿದ್ದಾರೆ. ಪ್ರತಿವಾದಿ ನೇರವಾಗಿ ಪರಿಚಿತರಾಗಿದ್ದಾರೆ. ಯಾವುದೇ ಮಧ್ಯವರ್ತಿಗಳು ಇರಲಿಲ್ಲ. ಸಿಮೆಂಟ್ ನ್ನು ಸರಬರಾಜು ಮಾಡಿದ ದಿನವೇ invoice ನ್ನು ಕೊಡುತ್ತೇವೆ. 50,000/- ಮೇಲ್ಪಟ್ಟ ಬಿಲ್ಲಿದ್ದರೆ E-way ಬಿಲ್ಲು ಜನರೇಟ್ ಆಗುತ್ತದೆ. ಅದಕ್ಕೆ ಆಯಾ ತಿಂಗಳಿನಲ್ಲಿ GST ಕಟ್ಟುತ್ತೇವೆ.

ಪ್ರತಿವಾದಿಯ ಮೇಲೆ ಒಟ್ಟು 4 ಪ್ರಕರಣ ದಾಖಲಿಸಿದ್ದೇನೆ. ಈ ನ್ಯಾಯಾಲಯದಲ್ಲಿ 2 ಪ್ರಕರಣ ಹಾಗೂ ಪ್ರಧಾನ ನ್ಯಾಯಾಲಯದಲ್ಲಿ 2 ಪ್ರಕರಣ ದಾಖಲಾಗಿವೆ ಎಂದರೆ ಇರಬಹುದು ಎನ್ನುತ್ತಾರೆ. Invoice ಮೇಲೆ ಸಿಮೆಂಟ್ ಡಿಲೆವರಿ ಕೊಟ್ಟ ನಂತರ ಪ್ರತಿವಾದಿಯ ಸಹಿ ಪಡೆದಿದ್ದೇವೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ವಕೀಲರಿಗೆ ನೀಡಿದ್ದೇನೆ ಎನ್ನುತ್ತಾರೆ. ನಾವು ಸಿಮೆಂಟ್ ನ್ನು ಕ್ರೆಡಿಟ್ ಆಧಾರದಲ್ಲಿ ಕೊಡುವುದಿಲ್ಲ. ಅದೇ ದಿನ ಹಣವನ್ನು ತೆಗೆದುಕೊಳ್ಳುತ್ತೇವೆ. ಬಿಲ್ವಿಕಾ construction ಗೆ ಪಾಲುದಾರರು ಇದ್ದಾರೆ. ಪ್ರತಿವಾದಿಯೊಬ್ಬರೇ ಮಾಲೀಕರಲ್ಲ ಎಂದು ನನಗೆ ಗೊತ್ತಿದೆ. ಈ ಹಿಂದೆ ಬಿಲ್ವಿಕಾ construction ರವರು ಸಿಮೆಂಟ್ ಸರಬರಾಜು ಮಾಡಿದ ಬಗ್ಗೆ ಹಣ ಪಾವತಿಸಿದ್ದಾರೆ.

ಸಿಮೆಂಟ್ ಸರಬರಾಜು ಬಗ್ಗೆ ಬಿಲ್ವಿಕಾ construction ಖಾತೆಯಿಂದ ಹಣ ಪಾವತಿಯಾಗಿದೆ ಎಂದರೆ ಸರಿ ಸಾಕ್ಷಿಯು ಮುಂದುವರಿದು ನಗದಾ ಸಹ ನನಗೆ ಪಾವತಿಸಿದ್ದಾರೆ ಎನ್ನುತ್ತಾರೆ. ನಾನು ಹಾಜರುಪಡಿಸಿರುವ ಚೆಕ್ ಪ್ರತಿವಾದಿಯ ವೈಯಕ್ತಿಕ ಚೆಕ್ ಎಂದರೆ ಸರಿ. ಅವರು ಸಹ ಪಾಲುದಾರರು ಎನ್ನುತ್ತಾರೆ. ಪ್ರತಿವಾದಿಯೊಂದಿಗಿನ ವ್ಯವಹಾರಕ್ಕೆ ಎಲ್ಲಾ ಹಣ ಪಾವತಿಯಾಗಿದ್ದು, ಪ್ರತಿವಾದಿ ನನ್ನೊಂದಿಗೆ ವ್ಯವಹಾರ ಮುಂದುವರಿಸುವುದಿಲ್ಲವೆಂದು ತಿಳಿದು ಪ್ರತಿವಾದಿಯ ನೌಕರರ ಕಡೆಯಿಂದ ಅವರ ವೈಯಕ್ತಿಕ ಚೆಕ್ ನ್ನು ಪಡೆದು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಚೆಕ್ ಗಳ ಆಧಾರದ ಮೇಲೆ 4 ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಿದ್ದೆ ಎಂದರೆ ಸರಿ. ಆ 4 ಪ್ರಕರಣಗಳಲ್ಲಿ ಪ್ರತಿವಾದಿ ನಿರ್ದೋಷಿ ಎಂದು ಅದೇಶವಾಗಿದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಯ construction site ಗೆ ಸಿಮೆಂಟ್ ಸರಬರಾಜು ಮಾಡುತ್ತಿದ್ದೆ. ಈ ಬಗ್ಗೆ transportation receipt ಇದೆ. ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. ಪ್ರತಿವಾದಿಯ ಕಂಪನಿ ನನಗೆ ಎಲ್ಲಾ ಪಾವತಿಗಳನ್ನು ಮಾಡಿದ್ದರೂ ಸಹ ಪ್ರತಿವಾದಿಯ ಮೇಲಿನ ದ್ವೇಷಕ್ಕೆ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯೊಂದಿಗಿನ ವ್ಯವಹಾರಗಳ ಬಗೆಗಿನ ಎಲ್ಲಾ ಲೆಡ್ಜರ್ ಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ. ಯಾವುದೇ ವ್ಯವಹಾರ ನಡೆಯದ ಕಾರಣ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲು ಕಾಲಾವಕಾಶ ಕೋರಿದ್ದು, ನೀಡಲಾಯಿತು.**

**(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ.ಹೇ.ಕೇ.ಸರಿ ಇದೆ.

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.